ಅ) ಸಣ್ಣ ಪತ್ರಿಕೆಗಳ ಅಭಿವೃದ್ಧಿಯ ಬಗ್ಗೆ ಎಂ.ಬಿ. ಸಿಂಗ್ ವರದಿಯನ್ನು ಸರ್ಕಾರವು ಜಾರಿಗೊಳಿಸಲು ವಿಳಂಬ ನೀತಿಯನ್ನು ಅನುಸರಿಸುತ್ತಿರುವುದರ ಕಾರಣವೇನು ?

ಕೆ ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು)

ಅ) ಸರ್ಕಾರವು ಪ್ರತಿ ಜಿಲ್ಲೆಯಲ್ಲೂ ವಾರ್ತಾ ಭವನ ನಿರ್ಮಿಸಲು ಯೋಜನೆಯನ್ನು ಹಮ್ಮಿಕೊಂಡಿದೆ.

ಆ) ಎಂ.ಬಿ. ಸಿಂಗ್ ವರದಿಯನ್ನು ಅನುಷ್ಠಾನಕ್ಕೆ ತರುವ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಕೋಲಾರ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆ ಪ್ರಾರಂಭಿಸುವುದು

2485 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಕೋಲಾರ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆಗಳನ್ನು ಎಲ್ಲೆಲ್ಲಿ ಕೈಗೊಳ್ಳಲಾಗಿದೆ (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಆ) ಮಾಲೂರು ತಾಲ್ಲೂಕಿನಲ್ಲಿರುವ ಏತ ನೀರಾವರಿ ಯೋಜನೆಯಿಂದ ಮಾರ್ಕಂಡೇಯ ಕೆರೆಯ ಅಚ್ಚುಕಟ್ಟುದಾರರಿಗೆ ತೊಂದರೆಯಾಗುತ್ತಿರುವುದು ನಿಜವೇ

ಇ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ಸಚಿವರು)

ಅ) ಕೋಲಾರ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆಗಳಿವೆ. ತಾಲ್ಲೂಕುವಾರು ವಿವರ ಈ ರೀತಿ ಇದೆ.

ಕ್ರ. ಸಂ.	ತಾಲ್ಲೂಕು	ಯೋಜನೆ ಹೆಸರು	ಅಚ್ಚುಕಟ್ಟು (ಹೆಕ್ಟೇರು)
1)	ಮಾಲೂರು	ತೋರಲಕ್ಕಿ ಬಳಿ	40 ಕಾರ್ಯ
2)	ಮಾಲೂರು	ಪೆಮ್ಮದೊಡ್ಡಿ ಬಳಿ	42 ನಿರ್ವಹಿಸು
3)	ಬಂಗಾರಪೇಟೆ	ಮಾರಂಡಹಳ್ಳಿ ಬಳಿ	40 ತ್ತಿವೆ
4)	ಚಿಂತಾಮಣಿ	ಮಿಂಡಿಗಲ ಬಳಿ	ನೀರಿನ ಆಶ್ರಯದ್ಲ
5)	ಚಿಂತಾಮಣಿ	ಎಸಗನಹಳ್ಳಿ ಬಳಿ	ಕೊರತೆಯಿಂದ
6)	ಚಿಂತಾಮಣಿ	ಎನಿಗಬೆಲೆ ವಿದ್ಯಾಪೀಠದ ಬಳಿ	ಕಾರ್ಯ ನಿರ್ವಹಿಸುತ್ತಿಲ್ಲ

ಆ) ನಿಜವಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ.....

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಸಭಾಧ್ಯಕ್ಷರೇ ಕಾವೇರಿ ಜಲವಿವಾದ ವಿಚಾರದಲ್ಲಿ ಹೇಳಿಕೆ ಕೊಟ್ಟ ನಂತರ.....

ಅಧ್ಯಕ್ಷರು : ಮೊದಲು ಇದು ಮುಗಿಯಲಿ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಆಗಲಿ.

ಕಾವೇರಿ ವಿವಾದದ ಬಗ್ಗೆ ಮುಖ್ಯ ಮಂತ್ರಿಗಳಿಂದ ಹೇಳಿಕೆ

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೇ ಮಾನ್ಯ ವಿರೋಧಪಕ್ಷದ ನಾಯಕರು, ಮಾನ್ಯ ಉಪನಾಯಕರಾದ ಸಿಂಧ್ಯಾರವರು ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ಬೈರೇಗೌಡರು ಮಾನ್ಯ ಯಡಿಯೂರಪ್ಪನವರು ಬಾಬಾಗೌಡ ಪಾಟೀಲರು ಮತ್ತು ಮಾನ್ಯ ಪ್ರೊಫೆಸರ್ ನಂಜುಂಡಸ್ವಾಮಿಯವರು ಕಾವೇರಿ ಜಲವಿವಾದ ಸಮಸ್ಯೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾವು ನೀವು ಪತ್ರಿಕೆಗಳಲ್ಲಿ ವಿಚಾರವನ್ನು ಕೂಡ ಓದಿದ್ದೇವೆ. ಅದು ಸರಿಯಾಗಿ ಬರುತ್ತಿದೆ. ಇದರ ಬಗ್ಗೆ ವಿವರವಾದ ಹೇಳಿಕೆ ಕೊಡತಕ್ಕಂಥ ಅವಶ್ಯಕತೆ ಇಲ್ಲವೆಂದು ನಾನು ಭಾವಿಸುತ್ತೇನೆ. ಸುಪ್ರೀಂ ಕೋರ್ಟಿನಲ್ಲಿ ಈ ಬಗ್ಗೆ ವಿಚಾರಣೆ ನಡೆಯುತ್ತಿದೆ. ವಾದ ನಮ್ಮ ಸರ್ಕಾರದ ಪರವಾಗಿದೆ. ಬಹಳ ಸಮರ್ಥನೀಯವಾಗಿ ವಾದವನ್ನು ಮಂಡನೆ ಮಾಡಿದ್ದಾರೆ. ತಮಿಳುನಾಡಿನ ಪರವಾಗಿ ವಾದವನ್ನು ಅವರು ಮಂಡನೆ ಮಾಡತಕ್ಕಂಥ ಕಾಲದಲ್ಲಿ ಯಾವ ರೀತಿಯಾಗಿ ಸುಪ್ರೀಂ ಕೋರ್ಟ್ ಕಾನ್‌ಸ್ಟಿಟ್ಯೂಷನ್ ಬೇಂಚ್ ಏನಿದೆ ಅಲ್ಲಿ ಈ ವಿಚಾರವನ್ನು ಸೂಕ್ತವಾಗಿ ಪ್ರಸ್ತಾಪ ಮಾಡಿದ್ದಾರೆ ಎನ್ನತಕ್ಕಂಥಾದ್ದು ಮುಖ್ಯರಾಗಿರತಕ್ಕಂಥಾದ್ದು ಬಹುಶಃ ಈ ದಿವಸ ವಿರೋದ ಪಕ್ಷದ ನಾಯಕರಾದಿಯಾಗಿ ಎರಡೂ ಸದನದ ನಾಯಕರುಗಳು ಸಭೆಯನ್ನು ಸರ್ಕಾರದವರು ಕರೆದಿದ್ದೆವು.

ಅದರ ಉದ್ದೇಶ ಏನು ಬೆಳವಣಿಗೆಗಳು ಹಂತ ಹಂತವಾಗಿ ಬರುತ್ತವೆ ಅದರ ಬಗ್ಗೆ ತಮ್ಮ ಗಮನಕ್ಕೂ ಕೂಡ ತರಬೇಕು ಮತ್ತು ತಮ್ಮ ಸಲಹೆ ಪಡೆದು ಮುಂದಕ್ಕೆ ಸರ್ಕಾರ ಹೋಗಬೇಕು ಎನ್ನತಕ್ಕಂಥ ವಿಚಾರದಲ್ಲಿ ಸಭೆ ಕರೆದಾಗ ಸರ್ಕಾರಕ್ಕೆ ತಮ್ಮ ಸಹಕಾರ ಎಂದಿನಂತೆ ಇಂದೂ ಕೂಡ ಕೊಡಲಿಕ್ಕೆ ಎರಡು ಸದನದ ವತಿಯಿಂದ ಒಮ್ಮತದ ಅಭಿಪ್ರಾಯ ಬಂದಿದೆ ವಿರೋಧಪಕ್ಷದ ಎರಡೂ ಸದನದ ನಾಯಕರುಗಳಿಗೆ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಮತ್ತೊಮ್ಮೆ ಸಲ್ಲಿಸುತ್ತೇನೆ. ನನಗೆ ಟೆಲೆಕ್ಸ್ ಮೆಸೇಜ್ ಏನು ಬಂತು ಆಗ ಪತ್ರಿಕಾ ಮಿತ್ರರು ನನ್ನನ್ನು ಕಂಡು ಇದಕ್ಕೆ ಯಾವ ರೀತಿಯಲ್ಲಿ ತಾವು ತಮ್ಮ ರೀ ಆಕ್ಷನ್ ಇದೆ ಎಂದು ಕೇಳಿದಾಗ ರೀ ಆಕ್ಷನ್ ಸರ್ಕಾರದ ಪರವಾಗಿಯೇ ಇದೆ ಎಂದು ಹೇಳಿದ್ದೇನೆ. ಇದು ಉಭಯ ರಾಜ್ಯ ಸರ್ಕಾರಗಳ ನಮ್ಮ ರಾಜ್ಯ ಮತ್ತು ತಮಿಳುನಾಡಿನ ಒಳ್ಳೆಯ ಬಾಂಧವ್ಯವನ್ನು ನಾನು ಇಟ್ಟುಕೊಳ್ಳತಕ್ಕ ದೃಷ್ಟಿಯಿಂದ ಈ ಸಮಸ್ಯೆ ಬಗೆಹರಿಸತಕ್ಕಂಥ ದೃಷ್ಟಿಯಿಂದ ಕೊನೆಯ ಪಕ್ಷ temporary order of the Tribnal Constituted as per 1956 Act.

ಏನು ಇದೆ ಅದಕ್ಕೆ ಸಂಬಂಧಪಟ್ಟಂತೆ ಒಳ್ಳೆಯ ಸಲಹೆಯನ್ನು ಸುಪ್ರೀಂ ಕೋರ್ಟ್ ಕೊಟ್ಟಿದೆ. ಇದಕ್ಕೆ ಸ್ವಾಗತವನ್ನು ಕೂಡ ನಾನು ಮಾಡಿದ್ದೇನೆ. ಈ ವಿಚಾರವನ್ನು ತಮಿಳು ನಾಡು ಮುಖ್ಯಮಂತ್ರಿಗಳು ಸುಪ್ರೀಂ ಕೋರ್ಟ್ ಸಲಹೆಯನ್ನು ಪ್ರಸ್ತಾಪ ಮಾಡಿ ಅದು ಒಪ್ಪಿಗೆಯಾಗಿಲ್ಲ ಎನ್ನುವ ಮಾತನ್ನು ಅವರು ಹೇಳಿರತಕ್ಕಂಥಾದ್ದನ್ನು ಪತ್ರಿಕೆಗಳಲ್ಲಿ ಓದಿದ್ದೇವೆ. ಶ್ರೀ Parashran ಅವರ ಸರ್ಕಾರದ ಪರವಾಗಿ ವಾದ ಮಾಡತಕ್ಕಂಥಾವರು ಇದು ನನಗೆ ಒಪ್ಪಿಗೆಯಾಗಿಲ್ಲ ಎನ್ನವಂತಹ ಮಾತನ್ನು ಹೇಳಿದಾಗ ಬಹುಶಃ ಈ ಒಂದು ವಿಷಯವನ್ನು ಕಾನ್‌ಸ್ಟಿಟ್ಯೂಶನ್ ಬೇಂಚ್ ವತಿಯಿಂದ ಹೇಳತಕ್ಕಂಥ ಮಾನ್ಯ ನ್ಯಾಯಾಧೀಶರು ಆಲೋಚನೆ ಮಾಡಿ ಮತ್ತೊಮ್ಮೆ ವಿಚಾರ ಮಾಡುವುದು ಒಳ್ಳೆಯದು ಎನ್ನತಕ್ಕಂಥ ಸಲಹೆ ಮತ್ತೊಮ್ಮೆ ಅವರಿಗೆ ಕೊಟ್ಟಿದ್ದಾರೆ ಕೊಟ್ಟ ಮೇಲೆ ತಮಿಳುನಾಡು ಸರ್ಕಾರವನ್ನು ಕೇಳಿ ಮತ್ತೆ ಹೇಳುತ್ತೇವೆನ್ನುವ ಮಾತನ್ನು